# 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ.

ಸಿಸಿ.

| | |
|---|---|
| ಸಾಕ್ಷಿದಾರರ ಹೆಸರು | ಅಶೋಕ ಕುಮಾರ |
| ತಂದೆಯ ಹೆಸರು | ಟಿ. ಮಲ್ಲಪ್ಪ |
| ವಯಸ್ಸು | 42 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸ | ನೆಲಗದರನಹಳ್ಳಿ, ಬೆಂಗಳೂರು. |
| ಪ್ರಮಾಣೀಕರಿಸಿದ ದಿನಾಂಕ | 08/01/2024 |

**ಮುಖ್ಯ ವಿಚಾರಣೆ : ಪ್ರಭಾರ ಹಿ.ಸ ಸ. ಅಭಿಯೋಜಕರವರಿಂದ :**

ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುವುದಿಲ್ಲ. ನನಗೆ ನೆಲಗದರನಹಳ್ಳಿಯ ಗೃಹಲಕ್ಷ್ಮಿ ಲೇಔಟ್ ದಲ್ಲಿ ನಿವೇಶನ ನಂ. 6 ಎ ಇರುತ್ತದೆ. ಸದರಿ ನಿವೇಶನ ಸರ್ವೆ ನಂ. 98/2 ರಲ್ಲಿ ಇರುತ್ತದೆ. ನನಗೆ ಸದರಿ ನಿವೇಶನದ ಚೆಕಬಂದಿ ಹೇಳಲು ಬರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ನನ್ನನ್ನು ಠಾಣೆಗೆ ಸುಮಾರು 4 ವರ್ಷಗಳ ಹಿಂದೆ ಕರೆಯಿಸಿ ವಿಚಾರಣೆ ಮಾಡಿರುತ್ತಾರೆ. ಆದರೆ ನನ್ನ ಹೇಳಿಕೆ ಪಡೆದುಕೊಂಡ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನನಗೆ ಯಾವುದೇ ಮಾಹಿತಿ ಇಲ್ಲ.

(ಈ ಹಂತದಲ್ಲಿ ಹಿ.ಸ.ಸ.ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಿಶೀಲಿಸಿ ಅನುಮತಿ ನೀಡಲಾಯ್ತು)

**ಪಾಟೀ ಸವಾಲು : ಹಿ. ಸ. ಸ ಅಭಿಯೋಜಕರವರಿಂದ :**

2. ಗಂಗಮಾರಯ್ಯ ರವರಿಗೆ 6 ಜನ ಮಕ್ಕಳು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಅವರಲ್ಲಿ ಒಬ್ಬ ಮಗನಾದ ಹನುಮಂತ ಇವರ ಪರಿಚಯ ನನಗೆ ಇದೆ. ಹನುಮಂತ ರವರ ಸಹೋದರರು ಹನುಮಂತನಿಗೆ ಜಮೀನು ಮಾರಾಟ ಮಾಡಲು ಜಿ.ಪಿ.ಎ. ಕೊಟ್ಟಿದ್ದರು ಎಂದರೆ ಸರಿ. ಗೃಹಲಕ್ಷ್ಮಿ ಲೇಔಟ್ ನಲ್ಲಿರುವ ಸೈಟ್ ನಂ. 6 ಎ ನ್ನು ನಾನು ಖರೀದಿ ಮಾಡಿದ್ದೇನೆ ಎಂದರೆ ಸರಿ. ಗಂಗಮಾರಯ್ಯ ರವರ ಹೆಸರಿನಲ್ಲಿದ್ದ ಖಾತಾ ನಂ.98/2 ರಲ್ಲಿರುವ ಮತ್ತು ಅದರ ಅಕ್ಕಪಕ್ಕದಲ್ಲಿರುವ ಸುಮಾರು 61 ಎಕರೆ 31 ಗುಂಟೆ ಜಮೀನನ್ನು ಗೃಹಲಕ್ಷ್ಮಿ ಕೋ-ಆಪರೇಟಿವ್ ಸೊಸೈಟಿ ಯು ದಿನಾಂಕ 03/10/1992 ರಂದು ಸರ್ಕಾರದ ಕಡೆಯಿಂದ ವ್ಯವಸಾಯೇತರ ಜಮೀನಾಗಿ ಪರಿವರ್ತಿಸಿಕೊಂಡು ವಸತಿ ಗೃಹ ನಿರ್ಮಾಣಕ್ಕೆ ಸ್ವಾಧೀನಕ್ಕೆ ಪಡೆದುಕೊಂಡು, ಅಧ್ಯಕ್ಷರಾದ ಪ್ರೇಮಕುಮಾರ ರವರು ಸಂಘದ ಸದಸ್ಯರಿಗೆ ನೊಂದಣಿ ಮಾಡಿ ಕೊಟ್ಟಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ದಿನಾಂಕ 09/11/1954 ರಂದು ಸರ್ವೆ ನಂ. 98/2 ರಲ್ಲಿ ಎಕರೆ ಜಮೀನನ್ನು ಮುನಿಕಂಬಯ್ಯ ತಂದೆ ಬೀರಲಿಂಗಯ್ಯ ರವರು ತಮಗೆ ಪಿತ್ರಾರ್ಜಿತ ಬಂದ ಆಸ್ತಿಯನ್ನು ಗಂಗಮಾರಯ್ಯ ರವರಿಗೆ 2 ಎಕರೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 17/05/1961 ರಲ್ಲಿ ಮುನಿಕಂಬಯ್ಯ ರವರು ಗಂಗಮಾರಯ್ಯ ರವರಿಂದ 1 ಎಕರೆ 18 ಗುಂಟೆ ಜಮೀನನ್ನು ನೊಂದಣಿ ಸಂಖ್ಯೆ.1710/1961-62 ರಂತೆ ಕ್ರಯಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಗಂಗಮಾರಯ್ಯ ರವರ ಹೆಸರಿನಲ್ಲಿ 22 ಗುಂಟೆ ಜಮೀನು ಬಾಕಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

3. ಮುನಿಕಂಬಯ್ಯ ರವರು ಕೆಂಪಯ್ಯ ಬಿನ್ ಬೈರಪ್ಪ ರವರಿಗೆ ತಮಗೆ ಸೇರಿದ ಜಾಗವನ್ನು ಜಿ.ಪಿ.ಎ ಮಾಡಿಕೊಟ್ಟಿದ್ದು, ಸದರಿ ಜಿ.ಪಿ.ಎ. ಆಧಾರದ ಮೇಲೆ ಮುನಿಕಂಬಯ್ಯ ಹಾಗೂ ಕೆಂಪಯ್ಯ ರವರು ತಮಗೆ ಸೇರಿದ ಜಾಗವನ್ನು ಗಂಗಮಾರಯ್ಯ ರವರ ಹೆಸರಿನಲ್ಲಿದ್ದ ಸರ್ವೆ ನಂ. 98/2 ರಲ್ಲಿದ್ದ 18 ಗುಂಟೆ

ಜಮೀನನ್ನು ಗೃಹಲಕ್ಷ್ಮಿ ಲೇಔಟ್ ಗೆ ಮಾರಾಟ ಮಾಡಿರುತ್ತಾರೆ ಎಂದರೆ 18 ಗುಂಟೆ ಮಾರಾಟ ಮಾಡಿಲ್ಲ. ಗೃಹಲಕ್ಷ್ಮಿ ಲೇಔಟ್ ನವರು ಗಂಗಮಾರಯ್ಯ ರವರಿಗೆ ಸೇರಿದ ಜಮೀನನ್ನು ಒತ್ತುವರಿ ಮಾಡಿಕೊಂಡು ಸೈಟುಗಳನ್ನಾಗಿ ವಿಂಗಡಿಸಿ ಮಾರಾಟ ಮಾಡಿರುತ್ತಾರೆ ಎಂದರೆ ಆ ರೀತಿ ಮಾಡಿದ್ದಾರೆ ಎಂದು ಸಿವಿಲ್ ನ್ಯಾಯಾಲಯದಲ್ಲಿ ಕೇಸು ಹಾಕಿ ಗೆದ್ದಿರುತ್ತಾರೆ. ಕೆಂಪಯ್ಯ ರವರ ಮಗನಾದ ಬಸವರಾಜ ಇವರಿಗೆ ಗೃಹಲಕ್ಷ್ಮಿ ಬಡಾವಣೆ ರವರು ವಿಂಗಡಿಸಿದ್ದ ಸೈಟ ನಂ. 540/ಎ ಸೈಟ್ ನ್ನು ದಿನಾಂಕ 17/06/2006 ರಂದು ರೂ.40,200/- ರೂಪಾಗಳಿಗೆ ಮಾರಾಟ ಮಾಡಿದ್ದು, 6 ತಿಂಗಳ ನಂತರ ಅದೇ ಸೈಟ್ ನ್ನು ದಿನಾಂಕ 07/12/2006 ರಂದು ಬಸವರಾಜ ರವರು ಪ್ರಕಾಶ ನಗರದ ಟಿ.ಎನ್, ಗೌಡ ರವರಿಗೆ ರೂ.6,70,000/- ಮೊತ್ತಕ್ಕೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ತಿಳಿಯಿತು ಎಂದರೆ ನನಗೆ ಮಾಹಿತಿ ಇಲ್ಲ. ಬಸವರಾಜ ಹಾಗೂ ಗೃಹಲಕ್ಷ್ಮಿ ಸಂಘದವರು ಶಾಮೀಲಾಗಿ ಮೋಸ ಮಾಡುವ ಉದ್ದೇಶದಿಂದ ಈ ರೀತಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 21/09/2018 ರಂದು ಟಿ.ಎ. ಗೌಡ ರವರು ಸೈಟ ಬಳಿ ಕಂಪೌಂಡ ಕಟ್ಟಲು ಬಂದಾಗ ನಾನು, ಕೃಷ್ಣ ಮೂರ್ತಿ, ವೆಂಕಟರಮಣಪ್ಪ ರವರು ಅವರಿಗೆ ಈ ಜಮೀನು ಗೃಹಲಕ್ಷ್ಮಿ ಬಡಾವಣೆಗೆ ಸಂಬಂದಪಟ್ಟಿದ್ದಲ್ಲ, ಈ ಸೈಟ್ ತಮಗೆ ಸೇರಿದ್ದು ಎಂದು ಹೇಳಿದೆವು ಎಂದರೆ ಸರಿಯಲ್ಲ. ಈ ಕುರಿತು ನಾನು ದಿನಾಂಕ 24/12/2018 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೆ ಎಂದರೆ ನಾನು ಪೊಲೀಸ್ ಠಾಣೆಗೆ ಹೋಗಿದ್ದೆ, ಆದರೆ ಏನು ಹೇಳಿದ್ದೆ ಎಂದು ನನಗೆ ನೆನಪಿಲ್ಲ. ಈ ಮೇಲಿನಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-1 ಎಂದು, ಹೇಳಿಕೆಯ ಭಾಗವನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ನಿಪಿ-1 ರಂತೆ ಹೇಳಿಕೆ ನೀಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಶ್ರೀ. ಎಮ್.ಜಿ.ಕೆ. ವಕೀಲರಿಂದ ಃ**

4. ಸರ್ವೆ ನಂ. 98/2 ಭೂಸ್ವಾಧೀನ ಆಗಿರುತ್ತದೆ ಎಂದರೆ ಸರಿ.

**<u>ಮರು ವಿಚಾರಣೆ ಇಲ್ಲ</u>**

<u>(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)</u>

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**